# ಪರ್ಯಾಯ ಶೈಕ್ಷಣಿಕ ಯೋಜನೆ : 2021–22

**ತರಗತಿ :9** **ತಿಂಗಳು : ಡಿಸೆಂಬರ್** **ವಿಷಯ : ದ್ವಿತೀಯ ಭಾಷೆ–ಕನ್ನಡ**

| ಕ್ರ.ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಡಿಸೆಂಬರ್** ಮೊದಲನೆಯ ವಾರ | **ಉರುಸುಗಳಲ್ಲಿ ಭಾವೈಕ್ಯತೆ**<br>• ನೀಡಿರುವ ಸುಳಿಹು ಪದಗಳನ್ನು ಬಳಕೆ ಮಾಡಿಕೊಂಡು ಅರ್ಥಪೂರ್ಣ ವಾಕ್ಯಗಳನ್ನು ರಚಿಸುವುದು. | • ಕೃತಿಕಾರರಾದ ದಸ್ತಗೀರ ಅಲ್ಲೀಭಾಯಿ ಅವರ ಕಾಲ, ಸ್ಥಳ, ಕೃತಿಗಳಿಗೆ ಸಂಬಂಧಿಸಿದ ಪದಗಳನ್ನು ನೀಡಿ, ಅವುಗಳನ್ನು ಬಳಸಿಕೊಂಡು ಅರ್ಥಪೂರ್ಣ ವಾಕ್ಯಗಳನ್ನು ರಚಿಸಿ ಲೇಖಕರ ಪರಿಚಯ ಮಾಡಿಸುವ(ಲಿಖಿತರೂಪದ) ಚಟುವಟಿಕೆ ಮಾಡಿಸುವುದು.<br>• ಮೌಖಿಕವಾಗಿ ಕೃತಿಕಾರರ ಪರಿಚಯ ಮಾಡಿಕೊಡಲು ಅವಕಾಶ ನೀಡುವುದು. | ದಸ್ತಗೀರ ಅಲ್ಲೀಭಾಯಿರವರ ಪರಿಚಯವನ್ನು ವಾಕ್ಯ ರೂಪದಲ್ಲಿ ಮಾಡಿ.<br>**ಮೌಲ್ಯಮಾಪನ ಹಾಳೆ 01** |
| | | • ಅಧ್ಯಾಪಕರು ಓದಿದಂತೆಯೇ ವಿದ್ಯಾರ್ಥಿಗಳು ಗದ್ಯಭಾಗವನ್ನು ಸೂಕ್ತ ಸ್ವರಭಾರಗಳೊಂದಿಗೆ ಲೇಖನ ಚಿಹ್ನೆಗಳನ್ನು ಅನುಸರಿಸಿ ಓದುವರು. | • ಅಧ್ಯಾಪಕರ ಮಾದರಿ ವಾಚನವನ್ನು ಗಮನಿಸಿ ವಿದ್ಯಾರ್ಥಿಗಳು ಗದ್ಯಭಾಗವನ್ನು ಅರ್ಥಪೂರ್ಣವಾಗಿ ಓದುವರು. | |
| | | • ಉರುಸುಗಳು ಹಿಂದೂ ಹಾಗೂ ಮುಸಲ್ಮಾನರ ಭಾವೈಕ್ಯತೆಯ ಸಂಕೇತಗಳು ಎಂಬುದನ್ನು ಅರ್ಥೈಸಿಕೊಳ್ಳುವರು. | • ಪಠ್ಯವನ್ನು ಮೌನವಾಗಿ ಓದಿ ಅರ್ಥ ಮಾಡಿಕೊಂಡು ಭಾರತದ ವಿವಿಧೆಡೆ ಆಚರಿಸುವ ಪ್ರಸಿದ್ಧ ಉರುಸುಗಳ ಆಚರಣೆ ಹಾಗೂ ಅವುಗಳ ವಿಶೇಷತೆಗಳನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವರು. | ಉರುಸುಗಳು ಹಿಂದೂ ಹಾಗೂ ಮುಸಲ್ಮಾನರ ಭಾವೈಕ್ಯತೆಯ ಪ್ರತೀಕಗಳಾಗಿವೆ ಎಂಬುದನ್ನು ಉದಾಹರಣೆಯೊಂದಿಗೆ ವಿವರಿಸಿ. |

| | | | | |
|---|---|---|---|---|
| | | • ಉತ್ತರ ಕರ್ನಾಟಕ ಭಾಗದಲ್ಲಿ ಆಚರಿಸುವ ಜಾತ್ರೆಗಳು ಮತ್ತು ಅವುಗಳ ವಿಶೇಷತೆಗಳನ್ನು ಅರ್ಥೈಸಿಕೊಳ್ಳುವರು. | • ಗುಲಬರ್ಗಾ, ಲಕ್ಷ್ಮೀಶ್ವರ, ಧಾರವಾಡ, ಗೋಕಾಕ್ ಮುಂತಾದ ಸ್ಥಳಗಳಲ್ಲಿ ನಡೆಯುವ ವಿವಿಧ ಜಾತ್ರೆಗಳು ಮತ್ತು ಆ ಸಂದರ್ಭದ ವಿಶೇಷ ಆಚರಣೆಗಳನ್ನು ತಮ್ಮದೇ ಮಾತುಗಳಲ್ಲಿ ವಿವರಿಸುವರು | **ಮೌಲ್ಯಮಾಪನ ಹಾಳೆ 02** |
| | **ಡಿಸೆಂಬರ್** ಎರಡನೆಯ ವಾರ | • ಸೈದ್ಧಾಂತಿಕ ವ್ಯಾಕರಣಾಂಶಗಳು<br>• ಕ್ರಿಯಾಪದಗಳು, ಮೂಲ ಧಾತು, ಸಾಧಿತ ಧಾತುಗಳು, ಸಕರ್ಮಕ ಮತ್ತು ಅಕರ್ಮಕ ಧಾತುಗಳು ಇತ್ಯಾದಿಗಳನ್ನು ಅರ್ಥೈಸಿಕೊಳ್ಳುವರು. | • ಕ್ರಿಯಾಪದದ ಅರ್ಥವನ್ನು ವಿವರಿಸುವುದು. ಕೆಲವೊಂದು ವಾಕ್ಯಗಳನ್ನು ನೀಡಿ ಅದರಲ್ಲಿರುವ ಕ್ರಿಯಾಪದಗಳನ್ನು ಗುರುತಿಸುವ ಚಟುವಟಿಕೆ ಮಾಡಿಸುವುದು.<br>• ಕ್ರಿಯಾಪದಗಳನ್ನು ನೀಡಿ ಅವುಗಳಿಗೆ ಧಾತುಗಳನ್ನು ಪಟ್ಟಿ ಮಾಡಿಸುವುದು<br>• ಮೂಲಧಾತು ಮತ್ತು ಸಾಧಿತ ಧಾತುಗಳನ್ನು ಪಟ್ಟಿ ಮಾಡಿಸುವ ಚಟುವಟಿಕೆ ಮಾಡಿಸುವುದು.<br>• ಸಕರ್ಮಕ ಮತ್ತು ಅಕರ್ಮಕ ಧಾತುಗಳನ್ನು ಪಟ್ಟಿ ಮಾಡಿಸುವುದು | ಧಾತು ಎಂದರೇನು? ಧಾತುಗಳ ವಿವಿಧ ಪ್ರಕಾರಗಳನ್ನು ಉದಾಹರಣೆ ಸಹಿತ ವಿವರಿಸಿ |
| | | • ವಿಧ್ಯರ್ಥಕ, ನಿಷೇಧಾರ್ಥಕ ಮತ್ತು ಸಂಭಾವನಾರ್ಥಕ ಕ್ರಿಯಾರೂಪಗಳನ್ನು ಅರ್ಥೈಸಿಕೊಳ್ಳುವರು. | ಕ್ರಿಯಾರ್ಥಕ ರೂಪಗಳನ್ನು ವಿದ್ಯರ್ಥಕ, ನಿಷೇಧಾರ್ಥಕ, ಸಂಭಾವನಾರ್ಥಕ ರೂಪಗಳಾಗಿ ಪಟ್ಟಿ ಮಾಡಿಸುವ ಚಟುವಟಿಕೆ ಮಾಡಿಸುವುದು. | |

| | | | | |
|---|---|---|---|---|
| | | | **ಅಭ್ಯಾಸ ಹಾಳೆ –01** | |
| | **ಡಿಸೆಂಬರ್** ಮೂರನೆಯ ವಾರ | • ದುಶ್ಚಟಗಳಿಂದಾಗುವ ಪರಿಣಾಮಗಳ ಅರಿವು ಮೂಡಿಸುವುದು | • ಕುಡಿತ, ಧೂಮಪಾನ ಮುಂತಾದ ದುಶ್ಚಟಗಳು ನಮ್ಮ ಬದುಕಿನ ಮೇಲೆ ಬೀರುವ ಪರಿಣಾಮಗಳ ಕುರಿತು ಮಕ್ಕಳೊಂದಿಗೆ ಚರ್ಚೆ ಮಾಡುವುದು. | |
| | | • ಆಲಿಸಿದ ವಿಷಯಗಳನ್ನು ಅರ್ಥ ಮಾಡಿಕೊಳ್ಳುವುದು. | • ಎಸ್ ಜಿ ಸಿದ್ಧರಾಮಯ್ಯರವರ ಕವಿ ಪರಿಚಯದ ಧ್ವನಿ ಸುರುಳಿ ಕೇಳಿಸುವುದು. ನಂತರ ಕವಿ ಪರಿಚಯವನ್ನು ವಾಕ್ಯರೂಪದಲ್ಲಿ ಹೇಳಿಸುವುದು. | ಎಸ್ ಜಿ ಸಿದ್ಧರಾಮಯ್ಯರವರ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯಿರಿ. |
| | | • ಸರಳ ಭಾಷಾಂಶಗಳನ್ನು ಪರಿಚಯಿಸುವುದು. | • ವಿರುದ್ಧಾರ್ಥಕ ಪದ, ತತ್ಸಮ ತದ್ಭವ ಹಾಗೂ ಕನ್ನಡ ಸಂಧಿ ಪದಗಳನ್ನು ಅಭ್ಯಾಸ ಹಾಳೆಯ ಮೂಲಕ ಪರಿಚಯ ಮಾಡುವುದು.<br>**ಅಭ್ಯಾಸ ಹಾಳೆ – 02** | |
| | | • ಪದ್ಯಭಾಗವನ್ನು ರಾಗವಾಗಿ ಹಾಡಿಸುವುದು. | • ಸರಳ ರಾಗದಲ್ಲಿ ಪದ್ಯವನ್ನು ಶಿಕ್ಷಕರು ಹಾಡುವುದು ಅಥವಾ ಪದ್ಯವನ್ನು ರಾಗವಾಗಿ ಹಾಡಿರುವ ಧ್ವನಿಸುರುಳಿ ಕೇಳಿಸುವುದು ನಂತರ ಮಕ್ಕಳಿಂದ ಹಾಡಿಸುವುದು. | |
| | | • ಪದ್ಯದ ಭಾವಾರ್ಥವನ್ನು ಗ್ರಹಿಸಿ ತನ್ನದೇ ಮಾತುಗಳಲ್ಲಿ ಅಭಿವ್ಯಕ್ತಿಸುವರು. | • ಚರ್ಚೆ ಹಾಗೂ ಪ್ರಶ್ನೋತ್ತರ ಚಟುವಟಿಕೆಗಳ ಮೂಲಕ ಪದ್ಯದ ಭಾವಾರ್ಥವನ್ನು ಮಕ್ಕಳಿಗೆ ತಿಳಿಸುವುದು. | |

| | | | | |
|---|---|---|---|---|
| | | | ನಂತರ ಪದ್ಯದ ಭಾವಾರ್ಥವನ್ನು ತಮ್ಮದೇ ಮಾತುಗಳಲ್ಲಿ ವಿವರಿಸುವಂತೆ ತಿಳಿಸುವುದು. | |
| | **ಡಿಸೆಂಬರ್** ನಾಲ್ಕನೆಯ ವಾರ | **ಪೂರಕ ಓದು**<br>**ಸರ್ ಎಂ ವಿಶ್ವೇಶ್ವರಯ್ಯ**<br>• ಸಾಧಕರ ಜೀವನ ಚರಿತೆಯ್ರ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸುವುದು | • ಗ್ರಂಥಾಲಯದಲ್ಲಿರುವ ವಿವಿಧ ವ್ಯಕ್ತಿಗಳ ಜೀವನ ಚರಿತ್ರೆ ಪುಸ್ತಕಗಳನ್ನು ಓದಿ ಅರ್ಥಮಾಡಿಕೊಳ್ಳುವರು | |
| | | • ಸರ್.ಎಂ ವಿಶ್ವೇಶ್ವರಯ್ಯನವರ ಜನನ, ಗುರುಭಕ್ತಿ, ಕೀರ್ತಿ ಮತ್ತು ವ್ಯಕ್ತಿತ್ವವನ್ನು ಓದಿ ಅರ್ಥ ಮಾಡಿಕೊಳ್ಳುವರು. | • ಶಿಕ್ಷಕರು ಗದ್ಯಭಾಗವನ್ನು ಸ್ಪಷ್ಟವಾಗಿ ಲೇಖನ ಚಿಹ್ನೆಗಳನ್ನು ಅನುಸರಿಸಿ ಸೂಕ್ತ ಸ್ವರಭಾರಗಳೊಂದಿಗೆ ವಾಚಿಸುವರು.<br>• ಗದ್ಯಭಾಗವನ್ನು ಮೌನವಾಗಿ ಓದಿ ವಿಷಯಾಂಶಗಳನ್ನು ಅರ್ಥಮಾಡಿಕೊಂಡು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವರು. | ಸರ್ ಎಂ ವಿಶ್ವೇಶ್ವರಯ್ಯನವರಿಗೆ ದೊರೆತ ಗೌರವ ಪುರಸ್ಕಾರಗಳನ್ನು ಪಟ್ಟಿ ಮಾಡಿರಿ.<br>**ಮೌಲ್ಯಮಾಪನ ಹಾಳೆ –03** |

## ಅಭ್ಯಾಸ ಹಾಳೆ –01

- ಕೆಳಗಿನ ಕ್ರಿಯಾಪದಗಳಲ್ಲಿನ ಧಾತುಗಳನ್ನು ಗುರುತಿಸಿ ಬರೆಯಿರಿ.

ಮಾದರಿ : ಕೇಳಿದನು(ಕ್ರಿಯಾಪದ) – ಕೇಳು (ಧಾತು)

| ಕ್ರಿಯಾಪದ | ಧಾತು | | ಕ್ರಿಯಾಪದ | ಧಾತು |
|---|---|---|---|---|
| ಮಾಡುತ್ತಾನೆ | | | ಹಾಡಿದನು | |
| ಓದಿದಳು | | | ಮಲಗಿತು | |
| ನೆಗೆದನು | | | ಎದ್ದಳು | |
| ತಿಂದಿತು | | | ಓಡುತ್ತಾರೆ | |
| ಕುಡಿದಳು | | | ನೋಡಿತು | |

- ಈ ಕೆಳಗಿನವುಗಳನ್ನು ಮೂಲಧಾತು ಮತ್ತು ಸಾಧಿತ ಧಾತುಗಳಾಗಿ ವಿಂಗಡಿಸಿ.

| ತಿಳಿ, ಏರು, ನಡೆ, ಬಾಗು, ಇಳಿ, ಬೀಳು, ಮಲಗು, ಕನ್ನಡಿಸು, ಹಿಗ್ಗು, ಧಗಧಗಿಸು, ಈಜು, ದುಃಖಿಸು, ಮುಚ್ಚು, ಥಳಥಳಿಸು, ಉಣ್ಣು, ಬೆಳಗು | |
|---|---|
| ಮೂಲ ಧಾತು | ಸಾಧಿತ ಧಾತು |
| | |

- ಇವುಗಳನ್ನು ಸಕರ್ಮಕ ಧಾತು ಮತ್ತು ಅಕರ್ಮಕ ಧಾತುಗಳಾಗಿ ವರ್ಗೀಕರಿಸಿ.

| ಓದು, ಮಲಗು, ಮಾಡು, ಹುಟ್ಟು, ಕತ್ತರಿಸು, ಏಳು, ತೆರೆ, ಸೋರು, ಬಿಡು, ನಾಚು, ಕಟ್ಟು, ರಕ್ಷಿಸು, ಕುಡಿ, ಹೇಳು | |
|---|---|
| ಸಕರ್ಮಕ ಧಾತು | ಅಕರ್ಮಕ ಧಾತು |
| | |

- **ಅಡಿಗೆರೆ ಎಳೆದಿರುವ ಪದಗಳ ಕ್ರಿಯಾರ್ಥಕ ರೂಪಗಳನ್ನು ಬರೆಯಿರಿ.(ವಿಧ್ಯರ್ಥಕ, ನಿಷೇಧಾರ್ಥಕ, ಸಂಭಾವನಾರ್ಥಕ)**

  **ಮಾದರಿ : ನಾಳೆ ಮಳೆಯು ಬಂದೀತು. ಸಂಭಾವನಾರ್ಥಕ ಕ್ರಿಯಾಪದ**

1. ದೇವರು ನಿನಗೆ ಒಳ್ಳೆಯದನ್ನು ಮಾಡಲಿ. ________________
2. ರಾಮನು ಶಾಲೆಗೆ ಹೋಗನು. ________________
3. ಅವನು ಮರವನ್ನು ಏರಿಯಾನು. ____________________
4. ಗಣೇಶ ಪಾಠವನ್ನು ಗಟ್ಟಿಯಾಗಿ ಓದಲಿ. _____________
5. ಲಕ್ಷ್ಮೀ ನನ್ನ ಮಾತನ್ನು ಕೇಳಳು. ____________
6. ಮಕ್ಕಳು ಅನ್ನವನ್ನು ತಿಂದಾರು. ___________________
7. ಮಕ್ಕಳಿಗೆ ಪರೀಕ್ಷೆಯಲ್ಲಿ ಜಯವಾಗಲಿ. ______________
8. ಶಿಕ್ಷಕರು ತರಗತಿಗೆ ಬಂದಾರು. ____________
9. ಲಕ್ಷ್ಮೀಶನು ನಾಳೆ ಬಂದಾನು. _____________
10. ಪುಟ್ಟಿ ಊರಿಗೆ ಬಾರಳು. ______________

## ಅಭ್ಯಾಸ ಹಾಳೆ – 2

## ಮನೆಗೆಲಸದ ಹೆಣ್ಣು ಮಗಳು

**ಈ ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ**

ಮಾದರಿ : ಮನೆಗೆಲಸ : ಮನೆ + ಕೆಲಸ = ಆದೇಶಸಂಧಿ

| ಸಂಧಿಪದ | ಬಿಡಿಸುವ ಕ್ರಮ | ಸಂಧಿಯ ಹೆಸರು |
|---|---|---|
| ಶಾಲೆಯೊಂದು | | |
| ದೇವರೆಂದು | | |
| ಮಕ್ಕಳಲ್ಲವೆ | | |
| ಜೀತಕಿಟ್ಟನು | | |
| ನೀರೊಳಾಡಿ | | |
| ಹೆಣ್ಣೊಂದು | | |

**ಈ ಕೆಳಗಿನ ನಾಮಪದಗಳನ್ನು ಅವುಗಳ ವಿಧಕ್ಕೆ ಅನುಗುಣವಾಗಿ ಹೊಂದಿಸಿ**

| | | | | | |
|---|---|---|---|---|---|
| ಅಪ್ಪ | ಕಾವೇರಿ | ಕುಡುಕ | ವಿದ್ಯಾರ್ಥಿ | ಹಿಮಾಲಯ | ಪಟ್ಟಣ |
| ತುಮಕೂರು | ಬಟ್ಟೆ | ಮೂಕಿ | ಹುಡುಗ | ಭಿಕ್ಷುಕ | ಭಾರತ |
| ಕೃಷ್ಣದೇವರಾಯ | ಪುಸ್ತಕ | ಮನೆ | ಹಿಮಾಲಯ | ಸರೋವರ | ಕಿವುಡ |

| **ರೂಢನಾಮ** | **ಅಂಕಿತನಾಮ** | **ಅನ್ವರ್ಥನಾಮ** |
|---|---|---|
| | | |

**ಈ ಕೆಳಗಿನ ನಾಮಪದಗಳ ವಿಭಕ್ತಿ, ಪ್ರತ್ಯಯ ಮತ್ತು ಕಾರಕವನ್ನು ಬರೆಯಿರಿ.**

ಮಾದರಿ : ಮರವನ್ನು : ದ್ವಿತೀಯ (ವಿಭಕ್ತಿ) – ಅನ್ನು (ಪ್ರತ್ಯಯ) ಕರ್ಮಕಾರಕ (ಕಾರಕ)

| ನಾಮಪದ | ವಿಭಕ್ತಿ | ಪ್ರತ್ಯಯ | ಕಾರಕ |
|---|---|---|---|
| ಪುಸ್ತಕದ | | | |
| ಪಟ್ಟಣಕ್ಕೆ | | | |
| ಗುರುವು | | | |
| ಲೇಖನಿಯಿಂದ | | | |
| ಮಕ್ಕಳನ್ನು | | | |

| | | | |
|---|---|---|---|
| ಶಾಲೆಯಲ್ಲಿ | | | |
| ಮನೆಯ ದೆಸೆಯಿಂದ | | | |

**ಮೌಲ್ಯಮಾಪನ ಹಾಳೆ 01**

**ಉರುಸುಗಳಲ್ಲಿ ಭಾವೈಕ್ಯತೆ**

- ಕೆಳಗೆ ನೀಡಲಾಗಿರುವ ಪದಗಳಲ್ಲಿ ಸರಿಯಾದ ಪದಗಳನ್ನು ಆರಿಸಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಭರ್ತಿ ಮಾಡಿರಿ.

| |
|---|
| ದಸ್ತಗೀರ ಅಲ್ಲೀಭಾಯಿ, ನವಲಗುಂದ, ಸೊಟಕನಾಳ, ಸಕಾಲಿಕ, ನೆನೆನೆನೆದು, ದಣಿವು ಕಾಣದ ಪದಗಳು, ಕಥಾಸಂಚಯ, ಉತ್ತರ ಕರ್ನಾಟಕದ ಜನಪದ ಒಡಪುಗಳು, ಮುಸ್ಲೀಮರ ಹಬ್ಬ ಮತ್ತು ಉರುಸುಗಳು, ಧಾರವಾಡ, ಹೆಜ್ಜೆ ಪದಗಳು, 1952, ಮೊಹರಂ ಪದಗಳು. |
| ಕೃತಿಕಾರರಾದ ಶ್ರೀ ________________ರವರು ________________ ಜಿಲ್ಲೆಯ ______________ ತಾಲ್ಲೂಕಿನ ____________ ಎಂಬ ಗ್ರಾಮದಲ್ಲಿ ________ರಲ್ಲಿ ಜನಿಸಿದರು.<br>ಶ್ರೀಯುತರು ______________, ______________, ______________, ______________, ______________, ______________, ______________, ______________ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. |

**ಮೌಲ್ಯಮಾಪನ ಹಾಳೆ 02**

- ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.
  1. ಮಕಾನಪುರದ ಜಿಂದೇ ಷಾ ಮದಾರ ಉರುಸಿನ ಆಚರಣೆಯ ವಿಶೇಷತೆಯೇನು?
  2. ಮಕಾನಪುರದ ಜಿಂದೇ ಷಾ ಉರುಸಿನಲ್ಲಿ ಕೆಂಡ ತುಳಿಯುವ ಸಂಪ್ರದಾಯ ಯಾವ ಪ್ರಭಾವದಿಂದ ಬಂದುದಾಗಿದೆ?
  3. ಉರುಸುಗಳಲ್ಲಿ ಯಾವ ಧಾರ್ಮಿಕ ಸಂಸ್ಕೃತಿಯ ಮಿಲನವಿದೆ?
  4. ಉರುಸುಗಳು ಯಾವುದರ ಹೆಗ್ಗುರುತಾಗಿವೆ?
  5. ಅಜ್ಮೀರ್ ಮತ್ತು ದಿಲ್ಲಿಯ ದರಗಾದ ವಿಶೇಷತೆಗಳು ಏನು?
- ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.
  1. ಗುಲಬರ್ಗಾದ ಖ್ವಾಜಾ ಬಂದಾನವಾಜರ ದರಗಾದ ವಿಶೇಷತೆಗಳೇನು?
  2. ಇಳಕಲ್ಲಿನ ಮುರ್ತುಜಾ ಖಾದ್ರಿಯವರ ಉರುಸಿನಲ್ಲಿ ಹಿಂದೂ ಭಕ್ತರಿಗೆ ಯಾವ ಗೌರವದ ಸ್ಥಾನಗಳು ಲಭಿಸಿವೆ?
  3. ಉರುಸು ಮತ್ತು ಜಾತ್ರೆಗಳ ಆಚರಣೆಗಳಲ್ಲಿ ಕಂಡು ಬರುವ ವಿಶೇಷತೆಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಮೌಲ್ಯಮಾಪನ ಹಾಳೆ –03

## ಪೂರಕ ಓದು – ಸರ್ ಎಂ ವಿಶ್ವೇಶ್ವರಯ್ಯ

- ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1. ವಿಶ್ವೇಶ್ವರಯ್ಯನವರು ಯಾವಾಗ ಜನಿಸಿದರು?

______________________________

______________________________

2. ವಿಶ್ವೇಶ್ವರಯ್ಯನವರ ಜನ್ಮಸ್ಥಳ ಯಾವುದು?

______________________________

______________________________

3. ವಿಶ್ವೇಶ್ವರಯ್ಯನವರ ತಂದೆ ತಾಯಿಯ ಹೆಸರೇನು?

______________________________

______________________________

4. ಉಪಾಧ್ಯಾಯರು ವಿಶ್ವೇಶ್ವರಯ್ಯನವರನ್ನು ಕುರಿತು ಯಾವ ರೀತಿಯ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು?

______________________________

______________________________

5. ಭಾರತ ಸರ್ಕಾರವು ವಿಶ್ವೇಶ್ವರಯ್ಯನವರಿಗೆ ನೀಡಿದ ಅತ್ಯುನ್ನತ ಪ್ರಶಸ್ತಿ ಯಾವುದು?

______________________________

______________________________

6. ವಿಶ್ವೇಶ್ವರಯ್ಯನವರಿಗೆ ದೊರೆತ ಗೌರವ ಪುರಸ್ಕಾರಗಳನ್ನು ತಿಳಿಸಿ.

______________________________

______________________________

7. ವಿಶ್ವೇಶ್ವರಯ್ಯನವರು ಜನತೆಗೆ ನೀಡಿದ ಸಂದೇಶವೇನು?

______________________________

______________________________

______________________________

8. ವಿಶ್ವೇಶ್ವರಯ್ಯನವರ ವ್ಯಕ್ತಿತ್ವದ ವಿಶೇಷತೆಗಳೇನು?

______________________________

______________________________

______________________________